SRI J.A.FERNENDEZ: They say exemption is permissible under Sec.9 (1) (a) of the Acto only for the sites allotted under EWS.

MR. SPEAKER: The Govt. has expressed its inclination for a fresh proposal.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ನಾವು ಬ್ರಿಟಿಷರ ಕಾಲಕ್ಕೆ ಹೋದೆವೇನೋ ಅನಿಸಿತು.

ಅಧ್ಯಕ್ಷರು: ಸಭಾಧ್ಯಕ್ಷನಾಗಿ ನಾನು ಎಲ್ಲರಿಗೂ ಅರ್ಥವಾಗುವ ಹಾಗೆ ಕೆಲಸ ಮಾಡಬೇಕು. ನನ್ನ ಖುಷಿಗೆ ಮಾಡುವ ಹಾಗಿಲ್ಲವಲ್ಲಾ.

ವಿಷಯ: ರಾಜ್ಯದಲ್ಲಿ ಬರ ಪರಿಹಾರಕ್ಕೆ ಕೇಂದ್ರದ ಅನುದಾನ.

249 (1433)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರದಿಂದ ಪ್ರತಿ ವರ್ಷ ಕರ್ನಾಟಕಕ್ಕೆ ಬರ ಪರಿಹಾರಕ್ಕೆ ಬರುವ ಅನುದಾನವೆಷ್ಟು?

ಆ) 1995-96, 1996-97 ಹಾಗೂ 1997-98 ಈ ವರ್ಷಗಳಲ್ಲಿ ಕೇಂದ್ರದಿಂದ ಬಂದಿರುವ ಬರ ಪರಿಹಾರವೆಷ್ಟು?

ಇ) ಕರ್ನಾಟಕ ರಾಜ್ಯದಲ್ಲಿ ಇರುವ ಶಾಶ್ವತ ಕ್ಷಾಮ ಪ್ರಧೇಶಗಳು ಯಾವುವು?

ಈ) ಹಿಂದುಳಿದ ಗಡಿ ಪ್ರದೇಶ ಚಾಮರಾಜ ನಗರವು ಸೇರಿದಂತೆ ಕರ್ನಾಟಕ ರಾಜ್ಯದ ಅನೇಕ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ದನ-ಕರುಗಳ ಮೇವಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಇದುವರೆವಿಗೂ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಕೇಂದ್ರದಿಂದ ಪ್ರತಿವರ್ಷ ಅವರ ಪಾಲಿನಂತೆ ಬಂದಿರುವ ಹಣ ಕೆಳಕಂಡಂತೆ ಇದೆ.

(ರೂ. ಕೋಟಿಗಳು)

1.	1995-96	29-62
2.	1996-97	31-39
3.	1997-98	33-12

ಆ) ಮೇಲಿನ ಅನುದಾನದ ಜೊತೆಗೆ 1997-98ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ರೂ. 22-00 ಕೋಟಿಗಳನ್ನು ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಭಾರತ ಸರ್ಕಾರವು ಬಿಡುಗಡೆ ಮಾಡಿದೆ.

ಇ) ರಾಜ್ಯದಲ್ಲಿ ಯಾವುದೇ ಪ್ರದೇಶವನ್ನು ಶಾಶ್ವತ ಕ್ಷಾಮ ಪ್ರದೇಶವೆಂದು ಗುರುತಿಸಿರುವುದಿಲ್ಲ.

ಈ) ಹೌದು.

ಉ) ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಸರ್ಕಾರವು ಕುಡಿಯುವ ನೀರಿನ ಪೂರೈಕೆಗಾಗಿ ರೂ. 36-20 ಕೋಟಿಗಳನ್ನು ಹಾಗೂ ಮೇವು ಪೂರೈಕೆಗಾಗಿ ರೂ. 80-00 ಲಕ್ಷಗಳ ಅನುದಾನವನ್ನು ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್: ಪ್ರತಿ ವರ್ಷ ಒಂದೇ ತರಹ ಉತ್ತರ ಕೊಡುತ್ತಿದ್ದಾರೆ. ನೀವು ಈ ವರ್ಷಗಳಲ್ಲಿ ಅಂದರೆ 1995ರಿಂದ 1998ನೇ ಸಾಲಿನವರೆಗೆ ಕೇಂದ್ರಸರ್ಕಾರವನ್ನು ಎಷ್ಟು ಅನುದಾನ ಬೇಕೆಂದು ಕೇಳಿದ್ದೀರಿ? ಅದು ಅತಿ ಮುಖ್ಯ. ಏಕೆಂದರೆ, ಕೇಂದ್ರ ಸರ್ಕಾರ ಪ್ರತಿ ಸಾರಿಯೂ ನಮ್ಮ ರಾಜ್ಯವನ್ನು ಮಲತಾಯಿ ಧೋರಣೆಯ ರೀತಿಯಲ್ಲಿ ನೋಡುತ್ತಿದೆ. ಅಭಾವ ಪರಿಸ್ಥಿತಿಗೆ ಬೇರೆ ರಾಜ್ಯಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತಿದೆ. ಆದರೆ, ನಮ್ಮ ರಾಜ್ಯವನ್ನು ಸರಿಯಾಗಿ ಗಮನಿಸುತ್ತಿಲ್ಲ. ಆದುದರಿಂದ, ತಾವೆಷ್ಟು ಅನುದಾನ ಕೇಳಿದ್ದೀರೆಂಬ ಬಗ್ಗೆ ಹೇಳಿ?

11.00 ಎ.ಎಂ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಮಾಹಿತಿ ನನ್ನ ಹತ್ತಿರ ಇಲ್ಲ, ನಂತರ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಅಂಕಿಅಂಶಗಳ ಪ್ರಕಾರ ಯ್ಯಾವ್ಯಾವ ಪ್ರದೇಶವನ್ನು ತೀವ್ರ ಅಭಾವಕ್ಕೆ ಒಳಗಾಗಿವೆ, ಅದನ್ನು ಗುರುತಿಸಿದ್ದೀರೋ?

ಶ್ರಿ ಬಿ.ಸೋಮಶೇಖರ್: ಅಭಾವಕ್ಕೆ ಮತ್ತು ಬರಗಾಲಕ್ಕೆ ಒಳಗಾಗಿರುವ

ಪ್ರದೇಶವನ್ನು ಸಧ್ಯಕ್ಕೆ ಯಾವುದನ್ನೂ ಗುರುತಿಸಿರುವುದಿಲ್ಲ. ಈ ಪ್ರದೇಶಗಳನ್ನು ಗುರುತಿಸುವುದಕ್ಕೆ ಪ್ರಸ್ತಾವನೆಯನ್ನು ಇಲಾಖೆಗೆ ಕಳುಹಿಸಿದ್ದೇವೆ. ಅದೇ ರೀತಿ ಮುಂದಿನ ವರ್ಷಕ್ಕೆ ಈ ಒಂದು ಪರಿಹಾರಕ್ಕೆ ಕೆಲವು ಪೂರಕ ಯೋಜನೆಗಳನ್ನು ತಯಾರು ಮಾಡಿಕೊಂಡು ಕೇಂದ್ರ ಸರ್ಕಾರಕ್ಕೆ ಕೊಡಬೇಕೆಂದು ಈಗಾಗಲೇ ಎಲ್ಲಾ ತಯಾರಿಕೆಯನ್ನು ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ಹಿಂದುಳಿದ ಗಡಿ ಪ್ರದೇಶ ಚಾಮರಾಜ ನಗರವು ಸೇರಿದಂತೆ ಕರ್ನಾಟಕ ರಾಜ್ಯದ ಅನೇಕ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಮತ್ತು ದನ-ಕರುಗಳ ಮೇವಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಅಂದರೆ ಅಭಾವ ಇದೆ ಎಂದು ಸರ್ಕಾರಕ್ಕೆ ಅರ್ಥವಾಗಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ ಪ್ರದೇಶಗಳೆಂದು ಸರ್ಕಾರ ಗುರುತಿಸಿಲ್ಲ. ಸರ್ಕಾರ ಕುಡಿಯುವ ನೀರಿನ ಪೂರೈಕೆಗೆ 36 ಕೋಟಿ 20 ಲಕ್ಷಗಳನ್ನು ಮತ್ತು ಮೇವು ಪೂರೈಕೆಗಾಗಿ 80 ಲಕ್ಷ ರೂಪಾಯಿಗಳ ಅನುದಾನವನ್ನು ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಸಾಕಾಗುತ್ತದೆಯೇ? ತಾವು ಕೊಡತಕ್ಕಂಥ ಹಣಕ್ಕೆ ಇವತ್ತು ಹಾಹಾಕಾರ ಪಡತಕ್ಕಂಥ ಸ್ಥಿತಿ ಇದೆ. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಪರಿಹಾರದ ಅನುದಾನಕ್ಕೆ, ಇದರಲ್ಲಿ ಪ್ರಕೃತಿಯ ಅತೀವೃಷ್ಟಿ ಅಥವಾ ಅನಾವೃಷ್ಟಿಯಾದರೂ ಆಗಿರಬಹುದು ಮತ್ತು ಭೂಕಂಪದಿಂದ ಮತ್ತು ಇತರೇ ಕಾರಣಕ್ಕಾಗಿ ಸಂಕಷ್ಟಕ್ಕೆ ಒಳಗಾದಾಗ ಅವರಿಗೆ ಈ ಹಣವನ್ನು ಕೊಡಲಾಗುತ್ತದೆ. ಇದಕ್ಕಾಗಿ 1995-96ರಲ್ಲಿ 39 ಕೋಟಿ 49 ಲಕ್ಷ ರೂಪಾಯಿಗಳನ್ನು 1996-97ನೇ ಸಾಲಿಗೆ 41 ಕೋಟಿ 85 ಲಕ್ಷ ರೂಪಾಯಿಗಳನ್ನು ಹಾಗು 1997-98ನೇ ಸಾಲಿಗೆ 44 ಕೋಟಿ 16 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 1998-99ನೇ ಸಾಲಿಗೆ 48 ಕೋಟಿ 39 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಕುಡಿಯುವ ನೀರಿನ ಪೂರೈಕೆಗಾಗಿ 36 ಕೋಟಿ 20 ಲಕ್ಷ ರೂಪಾಯಿಗಳನ್ನು ಮತ್ತು ಉದ್ಯೋಗಾವಕಾಶಗಳಿಗೋಸ್ಕರ 10 ಕೋಟಿ 85 ಲಕ್ಷ ರೂಪಾಯಿಗಳನ್ನು ಹಾಗು ಮೇವು ಪೂರೈಕೆಗಾಗಿ 80 ಲಕ್ಷ ರೂಪಾಯಿಗಳನ್ನು ಮತ್ತು ಕೃಷಿಯೇತರ ಕೆಲಸಕ್ಕೆ 40 ಲಕ್ಷ ರೂಪಾಯಿ, ಜಾನುವಾರುಗಳ ನಿರ್ವಹಣೆಗೆ 20 ಲಕ್ಷ ರೂಪಾಯಿ, ಸಾರ್ವಜನಿಕ ಆರೋಗ್ಯಕ್ಕೋಸ್ಕರ 85 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಕೇಂದ್ರ ಸರ್ಕಾರ 75 ಭಾಗ ಹಣ ಕೊಡುತ್ತದೆ, ಮಿಕ್ಕ 25 ಭಾಗವನ್ನು ರಾಜ್ಯ ಸರ್ಕಾರ ತುಂಬಬೇಕಾಗುತ್ತದೆ. ಈ ವರ್ಷ ಕನಿಷ್ಠ 400 ಕೋಟಿ ರೂಪಾಯಿ ಅನುದಾನ ನೀಡಬೇಕು ಎಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಪತ್ರ ಸಲ್ಲಿಸಿದೆ. ಇನ್ನು ಮುಂದೆ ಅಭಾವ ಪರಿಸ್ಥಿತಿ ಉಂಟಾದಾಗ ಸಮಸ್ಯೆ ಎದುರಿಸಲು ಸಿದ್ಧತೆಗಳನ್ನು ಮಾಡಿಕೊಳ್ಳುವುದರ ಬದಲು ಒಂದು ವರ್ಷದ ಮೊದಲೇ ಸಮಸ್ಯೆಯನ್ನು ಊಹಿಸಿ

ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ.

ವಿಷಯ: ಮೈಸೂರಿನ ಗಾಯಿತ್ರಿಪುರಂನ ಸಮುದಾನ ಭವನ

118 (360)

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂನಿನ ಗಾಯಿತ್ರಿ ಪುರಂನ ಸಮುದಾಯ ಭವನ ನಿರ್ಮಾಣ ಶೇ.60ರಷ್ಟು ನಿರ್ಮಿಸಿ ಸ್ಥಗಿತಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಸಮುದಾಯ ಭವನದ ಕಾಮಗಾರಿಯು ಪೂರ್ಣಗೊಳಿಸುವಲ್ಲಿ ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಶ್ರೀ ಮೀರಾಜೂದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ.

ಆ) ಮೈಸೂರಿನ ಗಾಯಿತ್ರಿ ಪುರಂ ಸಮುದಾಯ ಭವನ ನಿರ್ಮಾಣದ ಕೆಲಸದ ಪೈಕಿ ಉಳಿಕೆ ಕೆಲಸಕ್ಕೆ ಟೆಂಡರನ್ನು ಕರೆದು ಗುತ್ತಿಗೆದಾರರನ್ನು ನಿಗಧಿಪಡಿಸಿದೆ. ಕೆಲಸವನ್ನು ತುರ್ತಾಗಿ ಪ್ರಾರಂಭಿಸಲಾಗುವುದು.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಅಧ್ಯಕ್ಷರೆ, ಮೈಸೂರಿನ ಗಾಯಿತ್ರಿಪುರಂನ ಸಮುದಾಯ ಭವನದ ಕೆಲಸ 1992ನೇ ಇಸವಿಯಲ್ಲಿಯೇ ನಿಂತು ಹೋಗಿತ್ತು. ಅಲ್ಲಿ ಇನ್ನು ಶೇಕಡ 40ರಷ್ಟು ಕಾಮಗಾರಿ ಕೆಲಸ ಆಗಬೇಕಾಗಿದೆ. ಸರ್ಕಾರ ಉಳಿದ ಕೆಲಸಕ್ಕೆ ಟೆಂಡರ್ ಮಾಡಿ, ಗುತ್ತಿಗೆದಾರರನ್ನು ನಿಗದಿಪಡಿಸಿದ್ದೇವೆಂದು ಹೇಳಿದೆ, ಆದರೆ ಇದುವರೆಗೂ ಅಲ್ಲಿ ಕೆಲಸ ಪ್ರಾರಂಭ ಮಾಡಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಜನರ ಮಧ್ಯೆ ಹೋಗಿ ಏನು ಹೇಳಬೇಕು. ಮಾನ್ಯ ಸಭಾಧ್ಯಕ್ಷರೆ, ನನ್ನ ಹತ್ತಿರ ಈ ಸಮುದಾಯ ಭವನದ ಸಧ್ಯದ ಸ್ಥಿತಿಯ ಫೋಟೋ ಇದೆ, ಬೇಕಾದರೆ ತಮಗೆ ತೋರಿಸುತ್ತೇನೆ.

ಅಧ್ಯಕ್ಷರು: ಫೋಟೋ ಬೇಡ, ತಮ್ಮ ಮೇಲೆ ನನಗೆ ನಂಬಿಕೆ ಇದೆ.

ಶ್ರೀ ಬಿ.ಎನ್.ಬಚ್ಚೇಗೌಡ (ಪೌರಾಡಳಿತ ರಾಜ್ಯ ಸಚಿವರ ಪರವಾಗಿ): ಮೈಸೂರಿನ ಗಾಯಿತ್ರಿ ಪುರಂ ಸಮುದಾಯ ಭವನ ನಿರ್ಮಾಣಕ್ಕೆ 2.5 ಲಕ್ಷ ರೂಪಾಯಿಯ ಅಂದಾಜು ಪಟ್ಟಿಯಲ್ಲಿದೆ. ಈ ಹಣವನ್ನು ನಗರಪಾಲಿಕೆಯವರು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತಡವಾಗಿದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಶೇಕಡ